<u>**ದಿನಾಂಕ 19-12-2023 ರಂದು ಪಿಡಬ್ಲ್ಯೂ 12 ರವರನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**</u>

<u>**ಪಾಟೀ ಸವಾಲು: ಶ್ರೀಮತಿ ಎಂ.ಬಿ. ವಕೀಲರಿಂದ ಆರೋಪಿತನ ಪರವಾಗಿಃ**</u>

**6.** ನಮ್ಮ ಊರಿನಿಂದ ಆರೋಪಿತನ ಊರು ಸುಮಾರು **30** ಕಿಮೀ ದೂರದಲ್ಲಿದೆ. ಸುಮಾ ಮೃತಳಾಗುವುದಕ್ಕೆ ಸುಮಾರು ಒಂದು ವರ್ಷ ಮೊದಲು ನಾನು ಆಕೆಯನ್ನು ಕೊನೆಯದಾಗಿ ನೋಡಿದ್ದೆ.

**7.** ನನ್ನ ಮುಖ್ಯ ವಿಚಾರಣೆಯ **3** ನೇ ಪ್ಯಾರಾದಲ್ಲಿ ಹೇಳಿರುವಂತೆ ನಾವು ಕೋಣನೂರಿಗೆ ಹೋಗಿದ್ದ ದಿನಾಂಕ, ತಿಂಗಳು ಮತ್ತು ಇಸವಿಯನ್ನು ಹೇಳಲಾಗುವುದಿಲ್ಲ, ಆದರೆ ಅದು ಸುಮಾರು ಒಂದೂವರೆಯಿಂದ ಎರಡು ವರ್ಷಗಳ ಹಿಂದೆ. ನಾವು ಅಲ್ಲಿಗೆ ತಲುಪಿದಾಗ ಸುಮಾರು ಬೆಳಗ್ಗೆ **10.00** ಗಂಟೆ. ನಾವು ಅಲ್ಲಿಗೆ ಹೋದ ನಂತರ ಪೊಲೀಸರು ಅಲ್ಲಿಗೆ ಬಂದರು. ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದು ಪೊಲೀಸರು, ಆದರೆ ಅವರ ಹೆಸರು, ಹುದ್ದೆ ಗೊತ್ತಿಲ್ಲ. ಸದರಿ ಹೇಳಿಕೆಯಲ್ಲಿ ಪೊಲೀಸರು ಏನು ಬರೆದುಕೊಂಡಿದ್ದರು ಎಂದು ಆಗ ಗೊತ್ತಿತ್ತು, ಈಗ ನೆನಪಿಲ್ಲ. ಈ ಪ್ರಕರಣದಲ್ಲಿ ನಾನು ಒಟ್ಟು ಎಷ್ಟು ಸಹಿ ಮಾಡಿದ್ದೇನೆ ಎಂಬ ಪ್ರಶ್ನೆಗೆ ಸಾಕ್ಷಿ ಒಂದು ಎರಡು ಕಡೆ ಮಾಡಿದ್ದೇನೆ ಎಂದು ಉತ್ತರಿಸುತ್ತಾರೆ. ಅದು ಪೊಲೀಸ್ ಠಾಣೆಯಲ್ಲಿ ಮಾಡಿಸಿಕೊಂಡಿದ್ದಾರೆ ಎಂದರೆ ನಿಜ. ನಿಪಿ**–14** ಪಂಚನಾಮೆಯಲ್ಲಿ ಏನೇನು ಬರೆದಿದ್ದಾರೆಂದು ನನಗೆ ಹೇಳಲಾಗುವುದಿಲ್ಲ ಎಂದರೆ ನಿಜ. ಸದರಿ ದಿನ ನಾನು ಪೊಲೀಸ್ ಠಾಣೆಗೆ ಹೋದಾಗ ಸುಮಾರು ಮದ್ಯಾಹ್ನ **12.00** ಗಂಟೆ ಆಗಿತ್ತು. ಸದರಿ ದಿನದ ದಿನಾಂಕ ನೆನಪಿಲ್ಲ.

**8.** ಮೃತ ಸಮಾಳ ತಮ್ಮ ಚಾಸಾ**–15** ಆರೋಪಿತ ಸುಮಾಳಿಗೆ ವರದಕ್ಷಿಣೆ ಕಿರುಕುಳ ಕೊಡುತ್ತಿದ್ದ ವಿಷಯವನ್ನು ನನಗೆ ತಿಳಿಸುತ್ತಿದ್ದನು ಎಂದು ನಾನು ಸುಳ್ಳು ಹೇಳಿದ್ದೇನೆ ಎಂದು ಹೇಳುವುದು ಸುಳ್ಳು. ನಾನು ಮತ್ತು ನಮ್ಮ ಗ್ರಾಮದ ಒಟ್ಟು ಸುಮಾರು **12** ಜನ ಕೋಣನೂರಿಗೆ ಹೋಗಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ

ಎಂದು ಹೇಳುವುದು ಸುಳ್ಳು. ಮೃತ ಸುಮಾಳ ತಂದೆ ಮತ್ತು ತಮ್ಮ ನನಗೆ ಚೆನ್ನಾಗಿ ಪರಿಚಿತರು ಎಂದರೆ ನಿಜ. ಆದ್ದರಿಂದ ಅವರಿಗೆ ಸಹಾಯ ಮಾಡಬೇಕೆಂದು ಈ ಪ್ರಕರಣದಲ್ಲಿ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷ್ಯವನ್ನು ಕೊಡುತ್ತಿದ್ದೇನೆ ಎಂದು ಹೇಳುವುದು ಸುಳ್ಳು.

**ಮರು ವಿಚಾರಣೆ: ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

(ಬಿ.ಎಸ್. ರೇಖಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.